| ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು |
|---|

**ಎಸ್.ಸಿ. 116/2020**

| | | |
|---|---|---|
| ಸಾಕ್ಷಿದಾರರ ಹೆಸರು | ಃ ಭರತ್ ಸಿ.ಎಸ್. | ಪ್ರಮಾಣ ಮಾಡಿದ ದಿನಾಂಕಃ |
| ತಂದೆ ಹೆಸರು | ಃ ಚಂದ್ರಶೇಖರ | **23.11.2022** |
| ವಯಸ್ಸು | ಃ 31 ವರ್ಷ | |
| ವೃತ್ತಿ | ಃ ಖಾಸಗಿ ಉದ್ಯೋಗ | ಪಿಡಬ್ಲ್ಯೂ ಃ 03 |
| ವಾಸ ಸ್ಥಳ | ಃ ಮೈಸೂರು | ಸಿಡಬ್ಲ್ಯೂ ಃ 03 |

*ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ*

**ನ್ಯಾಯಾಲಯದೆದುರು ಹಾಜರಿರುವ ಆರೋಪಿಗಳು ಗೊತ್ತು. ಪ್ರಾಸಾ-1 ಮತ್ತು 2ರವರ ಪರಿಚಯ ಇದೆ. ಮೃತ ಚಿನ್ನಸ್ವಾಮಿ ಗೊತ್ತು. ಚಿನ್ನಸ್ವಾಮಿ 3 ವರ್ಷಗಳ ಹಿಂದೆ ಸ್ಮಶಾನದ ಬಳಿ ಕೊಲೆಯಾಗಿದ್ದ. ಅಲ್ಲಿಗೆ ಪೊಲೀಸರು ದಿನಾಂಕ 12ರಂದು ಬೆಳಿಗ್ಗೆ 10/11 ಗಂಟೆಗೆ ಬಂದು ಮಹಜರ ಬರೆದಿದ್ದರು. ಪ್ರಾಸಾ-1 ಮತ್ತು 2 ಸಹ ಆಗ ಅಲ್ಲಿ ಹಾಜರಿದ್ದರು. ಪೊಲೀಸರು ಸ್ಥಳದಲ್ಲಿ ಏನನ್ನೂ ತೆಗೆದುಕೊಳ್ಳಲಿಲ್ಲ. ನನ್ನ ರುಜು ಮಾತ್ರ ಪಡೆದಿದ್ದರು. ನಿಪಿ-2 ಹಾಗೂ 4ರಲ್ಲಿ ಸಾಕ್ಷಿ ತಮ್ಮ ರುಜು ಗುರುತಿಸಿದ್ದು, ಅದನ್ನು ನಿಪಿ-2(ಸಿ) ಹಾಗೂ ನಿಪಿ-4(ಬಿ) ಎಂದು ಗುರುತಿಸಿದೆ. ಇವುಗಳಿಗೆ ನಾನು ಠಾಣೆಯಲ್ಲಿ ರುಜು ಮಾಡಿದ್ದೆ.**

*(ಈ ಹಂತದಲ್ಲಿ, ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸರ್ಕಾರಿ ಅಭಿಯೋಜಕರು ಅನುಮತಿ ಕೇಳುತ್ತಾರೆ. ಸಾಕ್ಷಿಯು ಪೋಲೀಸರ ಎದುರಿನ ಹೇಳಿಕೆಯ ಪ್ರತಿಕೂಲವಾಗಿ ನುಡಿಯುತ್ತಿರುವುದರಿಂದ ಅನುಮತಿ ನೀಡಲಾಯಿತು.)*

*ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-*

**2. ಪೊಲೀಸರು ಚಿನ್ನಸ್ವಾಮಿಗೆ ಹಲ್ಲೆಯಾಗಿದ್ದ ಸ್ಥಳಕ್ಕೆ ನನ್ನನ್ನು ನೋಟೀಸು ಕೊಟ್ಟು ಕರೆಸಿದ್ದರು ಎಂದರೆ ಸರಿಯಲ್ಲ. ಅಲ್ಲಿ ನನ್ನ ಸಮಕ್ಷಮ ಮಹಜರ ಬರೆದು, ಮು.ಮಾ-ಗಳನ್ನು ಅಮಾನತ್ತುಪಡಿಸಿಕೊಂಡಿದ್ದರು ಎಂದರೆ ಸರಿಯಲ್ಲ. ಅವು ಬಾಟಲ್ ಚೂರು ಮತ್ತು ರಕ್ತದ ಕಲೆ ಆಗಿದ್ದವು ಎಂದರೆ ಸರಿಯಲ್ಲ. ಮು.ಮಾ-ಗಳ ಮೇಲೆ ಕೂಡ ಸ್ಥಳದಲ್ಲಿಯೇ ರುಜು ಮಾಡಿದ್ದೆ**

**ಎಂದರೆ ಸರಿಯಲ್ಲ. ಈಗ ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.**

**ಪಾಟೀ ಸವಾಲು ಃ ಆರೋಪಿಗಳ ಪರ ವಕೀಲರಿಂದಃ- ಇಲ್ಲ**

*ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.*

**ಓ ಹೇ ಕೇ ಸ ಇ ಎ ಒ.,**

**23.11.2022.**
(ಎಂ.ಎಲ್. ರಘುನಾಥ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು.